ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ತಮಗೆ ಸಹಾಯ ಮಾಡುತ್ತೇನೆ, ತಮಗೆ ಹೇಳುತ್ತೇನೆ, ಈಗ ಬಡ್ಡಿ ಮನ್ನ ಮಾಡುವುದಕ್ಕೆ ಆಗುವುದಿಲ್ಲ, ಅಸಲನ್ನು ಮನ್ನಾ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೀರಿ. ಮಳೆ ಇಲ್ಲದೆ ರಾಜ್ಯದ ರೈತರು ಬಹಳ ತೊಂದರೆಯಲ್ಲಿದ್ದಾರೆ. ಅಂಥದ್ದರಲ್ಲಿ ಕನ್‌ವರ್ಷನ್ ಮಾಡಿ ಸಹಾಯ ಮಾಡುತ್ತೇವೆ ಎಂದರೆ ಕಂತು ಮುಂದೆ ಹಾಕಿ ಸಹಾಯ ಮಾಡಲು ಸಾಧ್ಯ. ಅದನ್ನು ಮಾಡಬಹುದಲ್ಲಾ. ಪರ್ಯಾಯ ವ್ಯವಸ್ಥೆ ಎಂದರೆ ತಾವು ಇದನ್ನು ಮಾಡಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಪ್ರಯತ್ನ ಮಾಡುತ್ತೇನೆ.

ರಾಜ್ಯದಲ್ಲಿರುವ ವ್ಯವಸಾಯೋತ್ಪನ್ನ ಮಾರುಕಟ್ಟೆಗಳು

151 - ಶ್ರೀ ಜಿ. ರಾಜು ಗೌಡ (ಹನೂರು) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ವ್ಯವಸಾಯೋತ್ಪನ್ನ ಮಾರುಕಟ್ಟೆಗಳ ಸಂಖ್ಯೆ ಎಷ್ಟು?

ಆ) ಒಂದು ವರ್ಷದಲ್ಲಿ ಐದು ಲಕ್ಷಕ್ಕಿಂತಲೂ ಹೆಚ್ಚು ಆದಾಯ ಬರುವ ಮಾರುಕಟ್ಟೆಗಳೆಷ್ಟು?

ಇ) ರೈತರುಗಳ ಬೆಳೆದ ಉತ್ಪನ್ನಗಳನ್ನು ಗಿರಿವಿಟ್ಟುಕೊಳ್ಳಲು ಎಷ್ಟು ಮಾರುಕಟ್ಟೆಗಳು ಸಜ್ಜಾಗಿವೆ?

ಈ) ಪ್ರತಿ ಒಂದು ಮಾರುಕಟ್ಟೆಯಲ್ಲೂ ರೈತರಿಗೆ ಈ ಸೌಲಭ್ಯ ಸಿಗುವಂತೆ ಮಾಡಲು ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳೇನು?

ಶ್ರೀ ರಾಮಲಿಂಗರೆಡ್ಡಿ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ)123

ಆ) 97

ಇ) ರೈತರ ಕೃಷಿ ಉತ್ಪನ್ನಗಳನ್ನು ಶೀಘ್ರವೇ ಹಾಳಾಗುವ ಉತ್ಪನ್ನಗಳನ್ನು ಹೊರತುಪಡಿಸಿ ಅಡವಿಟ್ಟುಕೊಂಡು ಅಲ್ಪಾವಧಿ ಮುಂಗಡ ಹಣ ಮಂಜೂರು ಮಾಡುವ ಯೋಜನೆ ಈಗಾಗಲೇ 11 ಮಾರುಕಟ್ಟೆಗಳಲ್ಲಿ ಜಾರಿಗೆ ತರಲಾಗಿದೆ.

ಈ) ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ನಿಯಮಾವಳಿಗೆ ಇತ್ತೀಚೆಗೆ ತಿದ್ದುಪಡಿಯಾದಂತೆ ಮಾರುಕಟ್ಟೆ ಸಮಿತಿಯು ಮಾರುಕಟ್ಟೆ ಶುಲ್ಕ ಹಾಗೂ ಲೈಸನ್ಸ್ ಶುಲ್ಕಗಳ ಮೂಲಕ ರೂ. 5.00 ಲಕ್ಷಕ್ಕಿಂತ ಹೆಚ್ಚಿಗೆ ಆದಾಯ ಹೊಂದಿದ್ದು ಹಾಗೂ ತನ್ನ ಸ್ವಂತದ ಯೋಗ್ಯ ದಾಸ್ತಾನು ಗೋದಾಮು ಉಗ್ರಾಣಗಳನ್ನು ಹೊಂದಿದ್ದಲ್ಲಿ ಅದು ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು (ಶೀಘ್ರವೇ ಹಾಳಾಗದ ಉತ್ಪನ್ನಗಳನ್ನು ಹೊರತುಪಡಿಸಿ) ಅಡವಿಟ್ಟುಕೊಂಡು ಅಲ್ಪಾವಧಿ ಸಾಲ ಮುಂಗಡ ನೀಡಬಹುದಾಗಿದೆ. ಮಾರುಕಟ್ಟೆ ಸಮಿತಿಗಳಲ್ಲಿ ದಾಸ್ತಾನು ಯೋಗ್ಯ ಗೋದಾಮುಗಳು ಲಭ್ಯವಿಲ್ಲದ ಸಂದರ್ಭದಲ್ಲಿ ರಾಜ್ಯ ಹಾಗೂ ಕೇಂದ್ರ ಉಗ್ರಾಣ ನಿಗಮಗಳ ಗೋದಾಮುಗಳಲ್ಲಿ ಉತ್ಪನ್ನಗಳನ್ನು ದಾಸ್ತಾನು ಮಾಡಿ ಪಡೆದ ರಶೀದಿಯನ್ನು ಅಡವಿಟ್ಟುಕೊಂಡು ರೈತರಿಗೆ ಮುಂಗಡ ನೀಡಲು ಅವಕಾಶ ಕಲ್ಪಿಸಲಾಗಿದೆ. ರೂ. 5.00 ಲಕ್ಷಕ್ಕಿಂತ ಕಡಿಮೆ ಆದಾಯವಿರುವ ಮಾರುಕಟ್ಟೆಯಲ್ಲಿ ಈ ಸೌಲಭ್ಯ ಕಲ್ಪಿಸಲು ನಿಯಮಗಳ ಪ್ರಕಾರ ಅವಕಾಶವಿಲ್ಲ ಹಾಗೂ ಈ ಯೋಜನೆಗೆ ಸರ್ಕಾರದಿಂದ ಯಾವುದೇ ಆರ್ಥಿಕ ಸಹಾಯ ನೀಡಲಾಗುವುದಿಲ್ಲ.

ಶ್ರೀ ಜಿ. ರಾಜುಗೌಡ : ಅಧ್ಯಕ್ಷರೇ, ಎಷ್ಟು ಆದಾಯ ಬರುತ್ತದೆ. ಅದರ ಶೇಕಡ 10ರಷ್ಟನ್ನು ಮುಂಗಡವಾಗಿ ರೈತರಿಗೆ ಕೊಡತಕ್ಕಂಥ ಉತ್ಪನ್ನದ ಮೇಲೆ ಎಂದು ಹೇಳಿದ್ದೀರಿ. ಸ್ವಾಮಿ ಒಂದು ಮಾರುಕಟ್ಟೆಯಲ್ಲಿ ಐದು ಲಕ್ಷ ರೂ. ಆದಾಯ ಅರ್ಹವಾದುದು ಎಂದು ಹೇಳಿದ್ದಾರೆ. ಒಂದು ವೇಳೆ ಮಾರುಕಟ್ಟೆಗೆ ಐದು ಲಕ್ಷ

ರೂ. ಬಂದರೆ ಶೇಕಡ 10 ಅಂದರೆ 50,000 ರೂ.ಗಳಾಗುತ್ತದೆ. ಐವತ್ತು ಸಾವಿರ ರೂ.ಗಳಲ್ಲಿ ಏನು ಕೃಷಿ ಉತ್ಪನ್ನವಾಗುತ್ತದೆ. ದಯವಿಟ್ಟು ತಾವು ಏನು ಶೇಕಡ 10 ರಷ್ಟು ಎಂದು ಹೇಳಿದ್ದೀರಿ ಅದರ ಬದಲು ಶೇಕಡ 20ರಷ್ಟು ಮಾಡಿದಾಗ ಇದರ ಜೊತೆಗೆ ತಾವು ಮ್ಯಾಚಿಂಗ್ ಕಂಟ್ರೂಬ್ಯೂಷನ್ ಸಾಲದ ರೂಪದಲ್ಲಿ ಯಾವುದೇ ಗ್ರಾಂಟ್ ರೂಪದಲ್ಲಿ ಏನು ಕೃಷಿ ಉತ್ಪನ್ನ ಇಟ್ಟುಕೊಂಡು ನಾವು ರೈತರಿಗೆ ಸಹಾಯ ಮಾಡಲು ಸಾಧ್ಯವಾಗುತ್ತದೆ? ಅದನ್ನು ಮಾಡದಿದ್ದರೆ ತೊಂದರೆಯಾಗುತ್ತದೆ. ಆದಾಯ ಅನ್ನುವುದರ ಬಗ್ಗೆ ತಾವು ಕ್ಲಾರಿಫೈಡ್ ಮಾಡಲಿಲ್ಲ. ಒಟ್ಟಿನಲ್ಲಿ ಗ್ರಾಸ್ ಇನ್‌ಕಂ, ನೆಟ್ ಇನ್‌ಕಂ ಎನ್ನುವುದನ್ನು ತಾವು ಹೇಳಿಲ್ಲ. ದಯಮಾಡಿ ಇದಕ್ಕೆ ಉತ್ತರ ಕೊಡಿ ಸ್ವಾಮಿ.

ಶ್ರೀ ರಾಮಲಿಂಗರೆಡ್ಡಿ (ಅಧ್ಯಕ್ಷರೇ, ಹಿಂದಿನ ವರ್ಷದಲ್ಲಿ ಏನು ಎ.ಪಿ.ಎಂ.ಸಿ.ಗಳ ಆದಾಯ ಇರುತ್ತದೆ, ಅದರಲ್ಲಿ ಶೇ. 10 ರಷ್ಟು ಹಣವನ್ನು ಸಾಲವಾಗಿ ಕೊಡುವಂಥ ಕಾರ್ಯಕ್ರಮದಲ್ಲಿ ಅಪೆಕ್ಸ್ ಬ್ಯಾಂಕ್‌ನಲ್ಲಿ ಅಕೌಂಟ್ ಕೂಡ ಮಾಡಬೇಕು. ಅದು ಪ್ರತಿ ವರ್ಷ 10 ಪರ್ಸೆಂಟ್ ಇನ್‌ಕಂ ಇರುವುದರಿಂದ, ಅಷ್ಟು ಇನ್‌ಕಂ ಆ್ಯಡ್ ಆಗುತ್ತಾ ಹೋಗುತ್ತದೆ. ನಮ್ಮ ಬೆಂಗಳೂರು ಮಾರುಕಟ್ಟೆಯಲ್ಲಿ ಸುಮಾರು 7 ಕೋಟಿ ರೂ. ಆದಾಯವಿದೆ. ಅದರ 10 ಪರ್ಸೆಂಟ್ ಎಂದರೆ ಎಪ್ಪತ್ತು ಸಾವಿರ ರೂ.ಹಣ ಸಾಲ ಕೊಡುವುದರಲ್ಲಿ ಒದಗಿಸಿದ್ದೇವೆ. ಮೂರು ತಿಂಗಳು ಎಂದರೆ ವರ್ಷಕ್ಕೆ ನಾಲ್ಕು ಸಾರಿ ಬೇರೆಯವರಿಗೆ ಕೊಡಬಹುದು. ಅಂದರೆ ಒಟ್ಟು 2.75 ಲಕ್ಷ ಕೊಡಬೇಕು. ಹಾಗೆ ಮುಂದಿನ ವರ್ಷಕ್ಕೆಲ್ಲಾ ಅಷ್ಟೇ 10 ಪರ್ಸೆಂಟ್ ಸೇರಿಕೆಯಾಗುತ್ತದೆ. ಅಂದರೆ ಒಟ್ಟು 5 ವರ್ಷದಲ್ಲಿ ಬೆಂಗಳೂರು ಮಾರುಕಟ್ಟೆ ಒಂದರಲ್ಲೇ ಸುಮಾರು ಶೇ. 20 ರಷ್ಟು ಹಣ ಸಾಲ ಕೊಡುವಂಥ ಸ್ಕೀಮ್ ಇರುತ್ತದೆ. ಈ ಹಣವನ್ನು ನಾವು ಯಾವ ರೀತಿ ಬೇಕಾದರೂ ಉಪಯೋಗಿಸುವ ಹಾಗಿಲ್ಲ. ಒಂದು ಪೈಸೆಯೂ ಬೇರೆಯದ್ದಕ್ಕೆ ಎಂದು ಡೈವರ್ಟ್ ಮಾಡುವ ಹಾಗಿಲ್ಲ. ಆದ್ದರಿಂದ ಈ ವರ್ಷ ಕಡಿಮೆಯಾಗಿರಬಹುದು. ಆದರೆ 4-5 ವರ್ಷಗಳಲ್ಲಿ ಹೆಚ್ಚಿನ ಹಣ ಸಂಗ್ರಹವಾಗುತ್ತದೆ. ಇದರಿಂದ ಹೆಚ್ಚಿನ ರೈತರಿಗೆ ಸಾಲ ಕೊಡುವ ವ್ಯವಸ್ಥೆಯಾಗುತ್ತದೆ.

ಶ್ರೀ ಜಿ. ರಾಜುಗೌಡ : ಮಾನ್ಯ ಮಂತ್ರಿಗಳು ಬರೀ ಬೆಂಗಳೂರು ಮಾರುಕಟ್ಟೆ ಗುರಿಯನ್ನಿಟ್ಟುಕೊಂಡು ಹೇಳುತ್ತಾರೆ. ತಾವು 97 ಮಾರುಕಟ್ಟೆಗಳು ಈ ಸಾಲ ಕೊಡಲು ಅರ್ಹತೆ ಇದೆ ಎಂದು ಹೇಳಿದ್ದೀರಿ. ಒಂದು ಮಾರುಕಟ್ಟೆಯಲ್ಲಿ ಕೇವಲ ಐದು ಲಕ್ಷ ರೂ. ಉತ್ಪನ್ನ ಆಗುತ್ತದೆಂದು ಇಟ್ಟುಕೊಳ್ಳೋಣ, ತಮ್ಮ ಲೆಕ್ಕದ ಪ್ರಕಾರ 50,000 ರೂ.ಗಳಾಗುತ್ತದೆ. ಆದ್ದರಿಂದ ಶೇ. 20 ರಷ್ಟು ಮಾಡಿ, ಮ್ಯಾಚಿಂಗ್ ಗ್ರಾಂಟ್ ಎಂದು ಕೊಡಿ. ದಳ್ಳಾಳಿಗಳನ್ನು ತಪ್ಪಿಸಿ ರೈತರ ಉತ್ಪನ್ನಗಳನ್ನು ಇಟ್ಟುಕೊಂಡು ಸಕಾಲದಲ್ಲಿ ಸಹಾಯ ಮಾಡತಕ್ಕಂಥ ವ್ಯವಸ್ಥೆ ಮಾಡಿ. ಬರೀ ಬೆಂಗಳೂರು ಮಾರುಕಟ್ಟೆ ಉದಾಹರಣೆ ಇಟ್ಟುಕೊಳ್ಳಬೇಡಿ, ಕೊಳ್ಳೇಗಾಲ ಮಾರುಕಟ್ಟೆಯನ್ನು ಉದಾಹರಣೆಗೆ ತೆಗೆದುಕೊಳ್ಳಿ.

ಶ್ರೀ ರಾಮಲಿಂಗರೆಡ್ಡಿ : ಒಂದು ಎಗ್ಸಾಂಪಲ್ ಕೊಟ್ಟೆ. ಅಷ್ಟೇ ದೊಡ್ಡ ಸಂಸ್ಥೆಗಳು ಇವೆ. ಸಣ್ಣವು ಇರುತ್ತವೆ. ಅವರು 20 ಪರ್ಸೆಂಟ್ ಕೂಡಿ ಎಂದು ಹೇಳಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಬೆಳಗಾಂ ತಾಲ್ಲೂಕಿನಲ್ಲಿ ಗೊಬ್ಬರವನ್ನು ರಿಯಾಯಿತಿ ದರದಲ್ಲಿ ವಿತರಿಸುವುದು

507 - ಶ್ರೀ ಬಿ. ಐ. ಪಾಟೀಲ್ (ಉಚ್ಚಂಗಾವ್) : ಮಾನ್ಯ ಕೃಷಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂ ತಾಲ್ಲೂಕಿನ ರೈತರಿಗೆ ರಿಯಾಯ್ತಿ ದರದಲ್ಲಿ ರಸಗೊಬ್ಬರಗಳನ್ನು ಶೀಘ್ರವಾಗಿ ವಿತರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳು

ಶ್ರೀ ಹೆಚ್. ಎಂ. ರೇವಣ್ಣ (ಕೃಷಿ ಸಚಿವರು)